ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕ 02.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ- 1 ರಿಂದ 4ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಂ.ಕೆ.ಎಸ್ ರವರಿಂದಃ-</u>**

2ನೇ ವಾದಿ ನನ್ನ ತಮ್ಮ. ನಮ್ಮ ತಂದೆ ಮತ್ತು 1ನೇ ಪ್ರತಿವಾದಿಯ ತಂದೆ ಸಹೋದರರು. ಕುಟ್ಟಂಡ ಕುಟಂಬಕ್ಕೆ ಎಷ್ಟು ಎಕರೆ ಆಸ್ತಿ ಇತ್ತು ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂ. 54/1 ವಿಸ್ತೀರ್ಣ 5.46 ಎಕರೆ ಮತ್ತು ಸರ್ವೆ ನಂ. 54/12 ಪಿ 2 ವಿಸ್ತೀರ್ಣ 1.70 ಎಕರೆ ಜಮೀನು 1 ಮತ್ತು 5ನೇ ಪ್ರತಿವಾದಿಗಳ ತಂದೆಗೆ ವಿಭಾಗದ ಮೂಲಕ ಹೋಗಿರುತ್ತವೆ. ಅಸಲು ದಾವಾ ಸಂಖ್ಯೆ 7/1978 ನ್ನು ನಮ್ಮ ತಂದೆಯ ತಮ್ಮನಾದ ಕೆ.ಎಂ ಚಿನ್ನಪ್ಪ ರವರು ಸಲ್ಲಿಸಿದ್ದರು. ಅಂತಿಮ ಡಿಕ್ರಿಯ ಪ್ರಕಾರ ಕುಟುಂಬದ ಆಸ್ತಿಗಳನ್ನು ನನ್ನ ತಂದೆ ಮತ್ತು ಅವರ ಸಹೋದರರು ತಮ್ಮ ಹಿಸ್ಸೆಗಳಿಗೆ ಪಡೆದುಕೊಂಡಿರುತ್ತಾರೆ. ಅಂತಿಮ ಡಿಕ್ರಿಯಾಗುವಷ್ಟರಲ್ಲಿ ಗಣಪತಿಯವರು ಮೃತರಾಗಿದ್ದರಿಂದ ಅವರ ವಾರಸುದಾರರಾದ ಸರೋಜ ಗಣಪತಿ, ಕೆ.ಜಿ ಸುದೀರ್ ಗಣಪತಿ ಮತ್ತು ಕೆ. ವಿಮ್ಮಿ ಅಚ್ಚಯ್ಯರವರು ಅಂತಿಮ ಡಿಕ್ರಿಯಲ್ಲಿ ಪಕ್ಷಗಾರರಾಗಿದ್ದರು.

ಅಂತಿಮ ಡಿಕ್ರಿಯ ಮೂಲಕ ನನ್ನ ತಂದೆಯ ಹಿಸ್ಸೆಗೆ ಬಂದ ಸ್ವತ್ತುಗಳಲ್ಲಿ ಅವರು ಸ್ವಾಧೀನದಲ್ಲಿ ಇದ್ದು, ಕೆ.ಎಂ. ಗಣಪತಿಯವರ ಹೆಂಡತಿ ಮತ್ತು ಮಕ್ಕಳು ಅವರ ಹಿಸ್ಸೆಗೆ ಬಂದ ಸ್ವತ್ತುಗಳ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಏಪ್ರಿಲ್ 2000 ನೇ ಇಸವಿಯಲ್ಲಿ 1ನೇ ಪ್ರತಿವಾದಿ ಮತ್ತು ಆತನ ತಾಯಿ ನಮ್ಮ ಬಳಿ ಬಂದು, ಸರ್ವೆ ನಂ. 54/1 ವಿಸ್ತೀರ್ಣ 5.46 ಎಕರೆ ಮತ್ತು ಸರ್ವೆ ನಂ. 54/12 ಪಿ 2 ವಿಸ್ತೀರ್ಣ 1.70 ಎಕರೆ ಜಮೀನನ್ನು ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ಅಲ್ಲದೇ ತಮ್ಮ ಹಿಸ್ಸೆಗೆ ಬಂದ ಇತರೆ ಸರ್ವೆ ನಂಬರ್ ಗಳನ್ನು ಮಾರಾಟ ಮಾಡುವುದಾಗಿ ನಮ್ಮ ಬಳಿ ತಿಳಿಸಿದ್ದರು. ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟು ಜಮೀನನ್ನು ಮಾರಾಟ ಮಾಡುತ್ತಿದ್ದೇವೆ ಎಂದು ನಮ್ಮ ಬಳಿ ತಿಳಿಸಿರುವುದಿಲ್ಲ.

1ನೇ ಪ್ರತಿವಾದಿ ಮತ್ತು ಅವರ ತಾಯಿ ಮೇಲೆ ತಿಳಿಸಿದ ಸ್ವತ್ತುಗಳನ್ನು ರೂ. 7,50,000/- ಗಳಿಗೆ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ಕರಾರುಪತ್ರವನ್ನು ರೂ. 7,50,000/- ಗಳಿಗೆ ಮಾಡಿರುತ್ತೇವೆ. ಕರಾರುಪತ್ರ ಮಾಡಿಕೊಂಡ ಸಂದರ್ಭದಲ್ಲಿ ಮುಂಗಡ ಹಣ ರೂ. 3,00,000/- ಹಣವನ್ನು ನಾವು 1ನೇ ಪ್ರತಿವಾದಿ ಮತ್ತು ಅವರ ತಾಯಿಗೆ ನೀಡಿರುತ್ತೇವೆ. ಸದರಿ ರೂ. 3,00,000/- ಹಣವನ್ನು ಯಾವ ರೂಪದಲ್ಲಿ ನೀಡಿರುತ್ತೇವೆ ಎಂಬುದು ನನಗೆ ಈಗ ನೆನಪಿಲ್ಲ. ಸದರಿ ಮಾರಾಟಕ್ಕೆ ಸಂಬಂಧಿಸಿದಂತೆ ನಮ್ಮ ಮತ್ತು ಪ್ರತಿವಾದಿ 2 ರಿಂದ 4 ರವರ ನಡುವೆ ಇದುವರೆಗೂ ಯಾವುದೇ ಒಪ್ಪಂದ ಆಗಿರುವುದಿಲ್ಲ. ಪ್ರತಿವಾದಿ 2 ರಿಂದ 4 ರವರುಗಳಿಗೆ ನಾವು ಯಾವುದೇ ಹಣವನ್ನು ನೀಡಿರುವುದಿಲ್ಲ. 2002 ರಲ್ಲಿ ನಾವು ಸರ್ವೆ ನಂ. 54/1 ವಿಸ್ತೀರ್ಣ 5.46 ಎಕರೆ ಮತ್ತು ಸರ್ವೆ ನಂ. 54/12 ಪಿ 2 ವಿಸ್ತೀರ್ಣ 1.70 ಎಕರೆ ಜಮೀನುಗಳ ಸ್ವಾಧೀನವನ್ನು ತೆಗೆದುಕೊಂಡಿರುತ್ತೇವೆ.

2002 ರಿಂದ ನಾವು ಸದರಿ ಸ್ವತ್ತುಗಳಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ. ನಾವು 2022 ರವರೆಗೆ ಸದರಿ ಸ್ವತ್ತುಗಳ ಸ್ವಾಧೀನದಲ್ಲಿ ಇದ್ದೆವು. ಸರ್ವೆ ನಂ. 54/12 ಪಿ 2 ವಿಸ್ತೀರ್ಣ 1.70 ಎಕರೆ ಜಮೀನು ನಮ್ಮ ಸ್ವಾಧೀನದಲ್ಲಿ ಇದೆ. ಸರ್ವೆ ನಂ. 54/1 ರ ಜಮೀನನ್ನು 1ನೇ ಪ್ರತಿವಾದಿಯು ಮಾರಾಟ ಮಾಡಿದ್ದು, ಖರೀದಿದಾರರಾದ ಕುಟ್ಟಪ್ಪರವರು ಈಗ ಸದರಿ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ. ಸಾಕ್ಷಿಯು ಮುಂದುವರೆದು ಸರ್ವೆ ನಂ. 54/1 ರ ಸ್ವತ್ತನ್ನು ನಾನು 2023 ರಲ್ಲಿ ಕುಟ್ಟಪ್ಪರವರಿಂದ ಖರೀದಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿ ಕ್ರಯಪತ್ರದ ದೃಢೀಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಡಿ-1 ಎಂದು ಗುರುತಿಸಲಾಯಿತು. ಕ್ರಯಪತ್ರದಂತೆ ಪಹಣಿಯು ನನ್ನ ಹೆಸರಿಗೆ ದಾಖಲಾಗಿರುತ್ತದೆ. ಸದರಿ ಪಹಣಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಡಿ-2 ಎಂದು ಗುರುತಿಸಲಾಯಿತು. ನಾನು ಕುಟ್ಟಪ್ಪರವರಿಂದ ಸರ್ವೆ ನಂ. 54/1 ರ ಸ್ವತ್ತನ್ನು ಖರೀದಿಸುವುದಕ್ಕಿಂತ ಮೊದಲು ಕ್ರಯಪತ್ರವನ್ನು ಮಾಡಿಕೊಂಡಿರಲಿಲ್ಲ. ನಾನು ನಿ.ಡಿ-1 ದಾಖಲೆಯಡಿ ಸ್ವತ್ತನ್ನು ರೂ. 60,00,000/- ಗಳಿಗೆ ಮಾರಾಟ ಮಾಡಿರುತ್ತೇನೆ.

ನಿಶಾನೆ ಡಿ-1 ನ್ನು ಮಾಡಿಸಿಕೊಳ್ಳುವ ಸಂರ್ಭದಲ್ಲಿ 2 ರಿಂದ 4ನೇ ಪ್ರತಿವಾದಿಗಳ ಜೊತೆ ಯಾವುದೇ ಒಪ್ಪಂದ ಮಾಡಿಕೊಂಡಿರಲಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.